

# ಆಯುಷ್ಮಾನ್ ಭಾರತ್:
# ಆರೋಗ್ಯ ಮತ್ತು ಕ್ಷೇಮ ಕೇಂದ್ರ






# ಸರ್ವರ ಆರೋಗ್ಯವೂ ಕ್ಷೇಮ

**ರಾಜ್ಯದ ಜನತೆಯ ಆರೋಗ್ಯಕರ ಜೀವನಕ್ಕಾಗಿ, ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸುವ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ರೂಪುಗೊಂಡಿವೆ.**

ಸಾರ್ವತ್ರಿಕ ಆರೋಗ್ಯ ಯೋಜನೆ ಮತ್ತು ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳ (ಸಿ.ಪಿ.ಎಚ್.ಸಿ) ಅಡಿ ಅನುಷ್ಠಾನಗೊಳ್ಳುತ್ತಿರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ರಾಜ್ಯದ ಜನತೆಯು ಆರೋಗ್ಯಕರ ಜೀವನ ಸಾಗಿಸಲು ನೆರವಾಗಲಿವೆ. ವಿಶ್ವ ಸಂಸ್ಥೆಯು 2000–2015ರ ಅವಧಿಗೆ ಆರೋಗ್ಯ ವಲಯದಲ್ಲಿ 'ಮಿಲೆನಿಯಮ್ ಡೆವಲಪ್‌ಮೆಂಟ್ ಗೋಲ್ಸ್' ಎಂಬ ಕಾರ್ಯಕ್ರಮವನ್ನು ಎಲ್ಲ ಸದಸ್ಯ ರಾಷ್ಟ್ರಗಳ ಒಪ್ಪಿಗೆಯೊಂದಿಗೆ ನಿಗದಿಪಡಿಸಿತ್ತು. ಈ ಕಾರ್ಯಕ್ರಮವು ತಾಯಿ ಹಾಗೂ ಶಿಶು ಮರಣ ದರ ಕಡಿಮೆ ಮಾಡುವುದು ಸೇರಿದಂತೆ 12 ಗುರಿಗಳನ್ನು ಹಾಕಿಕೊಂಡಿತ್ತು. ಅದೇ ರೀತಿ, ಮಲೇರಿಯಾ ಹಾಗೂ ಇತರ ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಸಾವುಗಳ ಪ್ರಮಾಣವನ್ನೂ ಶೇ 50 ರಷ್ಟು ಕಡಿಮೆ ಮಾಡುವ ಆಶಯವನ್ನು ಹೊಂದಿತ್ತು. 2016ರಲ್ಲಿ ವಿಶ್ವ ಸಂಸ್ಥೆಯು ಎಲ್ಲ ಸದಸ್ಯ ರಾಷ್ಟ್ರಗಳ ಸಮ್ಮತಿಯೊಂದಿಗೆ ಸುಸ್ಥಿರ ಅಭಿವೃದ್ಧಿ ಗುರಿ ಕಾರ್ಯಕ್ರಮಗಳನ್ನು 2030 ರವರೆಗೆ ಹಮ್ಮಿಕೊಂಡಿದೆ. ಈ ಕಾರ್ಯಕ್ರಮದ ಗುರಿಗಳಲ್ಲಿ ಬಡತನ ನಿರ್ಮೂಲನೆ ಹಾಗೂ ಆರೋಗ್ಯದ ಸುಧಾರಣೆಗೂ ಆದ್ಯತೆ ನೀಡಲಾಗಿದೆ.



